

ಒಂದನ್ನೂ ಹೇಳದೆ ಹೆಚ್ಚು ಗೊಂದಲ ಮತ್ತು ಆತಂಕ ಸೃಷ್ಟಿಸುತ್ತಿರುವುದು ನಮಗೂ ಇರುಸು ಮುರುಸು ಎನಿಸತೊಡಗಿತ್ತು.

'ಅದೇನು ಹೇಳಿ ಬಿಡಿ, ಟೆನ್ಷನ್ ಮಾಡ್ಬೇಡಿ' ಎಂದೆ. 'ನಾನಿಲ್ಲಿ ಕಾಯುತ್ತಿದ್ದೇನೆ. ನಿಮಗೆ ಸಿಕ್ಕಿದೆ ನೋಡಿ' ಎಂದು ಕಣ್ಣರಳಿಸಿದ. ನಾನು ಇವನಿಲ್ಲಿ ತನ್ನದೊಂದು ಸಾಕುನಾಯಿ ಕಳಕೊಂಡು ಹುಡುಕುತ್ತಿರಬಹುದೆಂದು ಭಾವಿಸಿದೆ. ಹಿಮಾಲಯದ ಒಂಟಿತನ ಜಾಸ್ತಿಯಾಗಿ ಈತ ಹುಚ್ಚನಾಗಿರಬಹುದೇ ಎಂತಲೂ ಅನ್ನಿಸಿತು. 'ಕತ್ತಲಾಗುವ ಮೊದಲೇ ಇಲ್ಲಿ ಊಟ ಮಾಡಬೇಕು. ಮಲಗುವ ಮೊದಲು ನಿಮ್ಮ ಡೇರೆಗೆ ಬಂದು ಹೇಳುತ್ತೇನೆ. ನನಗೀಗ ಟೆನ್ಷನ್ ಶುರುವಾಗಿದೆ. ಆಮೇಲೆ ಸಿಗೋಣ' ಎಂದ.

'ಇವನ ಮುಂಡಾಮೋಚ್ತು' ಎಂದು ಬೈದುಕೊಂಡು, ಥಂಡಿಗೆ ಥೇಟ್ ಎಕ್ಕಡಗಳೇ ಆಗಿದ್ದ ರೊಟ್ಟಿ ಚೂರುಗಳ ಜೊತೆ ಇಷ್ಟವಿಲ್ಲದ ದಪ್ಪ ಕಾಳಿನ ಪಲ್ಯ ಜಗಿಯಲು ಹೋಗಿ ಕೂತೆವು. ತೀರಾ ಚಡಪಡಿಸುತ್ತಿದ್ದ ಅವನು ಮತ್ತೊಮ್ಮೆ ಬಂದು, ನನ್ನ 'ವಿಡಿಯೋ ತೋರಿಸಿ' ಎಂದು ಕ್ಯಾಮೆರಾ ಪಡೆದು ಚಿತ್ರವ ತಿರುತಿರುಗಿಸಿ ನೋಡಿದ. ಆತ ಹೀಗೆ ಮಾಡಿದರೆ ನನ್ನ ಬ್ಯಾಟರಿ ಖಾಲಿಯಾಗುತ್ತದೆ ಎಂಬ ಭಯ ನನಗೆ. ಪರ್ವತದ ಮೇಲಿದ್ದ ಒಂದು ವಾರವೂ ಎಲ್ಲೂ ಛಾರ್ಜಿಂಗ್ ವ್ಯವಸ್ಥೆಯೇ ಇರಲಿಲ್ಲ. ಅದು ಕರೆಂಟ್ ಇಲ್ಲದ ನಾಡು.

ಆತ ನನ್ನ ಹೆಗಲ ಮೇಲೆ ಕೈಯಿಟ್ಟು, 'ಮೈ ಡಿಯರ್ ಫ್ರೆಂಡ್, ನೀವು ನೋಡಿರುವುದು ಮಾಮೂಲಿ ಜೀವಿಯಲ್ಲ. ಅದು ಅಪರೂಪದ ಸ್ನೋ ಲೆಪರ್ಡ್. ಅದನ್ನು ಕಂಡು ಪಟ ತೆಗೆಯಲು ನಾನು ಐದು ವರ್ಷದಿಂದ ಇಲ್ಲಿಗೆ ಬರುತ್ತಿದ್ದೇನೆ. ನೋಡಿ ಈ ನನ್ನ ಅದೃಷ್ಟ ನಿಮ್ಮ ಪಾಲಾಗಿದೆ' ಎಂದು ಪ್ರಶ್ನಾರ್ಥಕವಾಗಿ ನಕ್ಕ. 'ಅಷ್ಟೊಂದು ವರ್ಷದಿಂದ ಸತತವಾಗಿ ಬಂದು ಕಾಯುತ್ತಿರುವ ನಿಮ್ಮ ಕಣ್ಣಿಗ್ಯಾಕೆ ಅದು ಕಂಡಿಲ್ಲ' ಎಂದು ಪ್ರಶ್ನಿಸಿದೆ.

ಅದಕ್ಕವನು ಹಣೆಮೇಲೆ ಗೆರೆ ಮೂಡಿಸಿಕೊಂಡು ಮಹತ್ವವಾದ ವಿಷಯ ಹೇಳುವವನಂತೆ, 'ಮಂಜಿನ ನಡುವೆ ನಡೆದಾಡುವ ಚಿರತೆಯನ್ನು ಗುರುತಿಸುವುದು ತುಂಬಾ ಕಷ್ಟ' ಎಂದ. 'ಯಾಕೆ?' ಎಂದೆ. 'ನೀವು ಇಲ್ಲಿಯ ಹಿಮವನ್ನೇ ಸುಮ್ಮನೆ ನೋಡುತ್ತಿರಿ. ಈ ಬಿಳಿಬಣ್ಣ